Regd No M 1299 SATYAVADI Founded 1917
The Oldest Newspaper of Mysore

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟಿದು)

ಸಂಪುಟ 32 ಸಂಚಿಕೆ 6] ಸೋಮವಾರ 13—9—48 [ಬಿಡಿ ಪ್ರತಿ 3 ಪೈ

ಅಕ್ಕಿ

ಮೈಸೂರು ಸಂಸ್ಥಾನದಲ್ಲಿ ಅಕ್ಕಿ ರೂ. ಗೆ 3 ಸೇರಿನಂತೆ ಮಾರುವ ಬಗ್ಗೆ ಸರ್ಕಾರ ಪರಿಶೀಲಿಸುತ್ತಿರುವುದಾಗಿ ತಿಳಿದುಬಂದಿದೆ.

ರಾಗಿ

ರೂ. ಗೆ 5 ಸೇರಿನಂತೆ ಸರ್ಕಾರ ರಾಗಿಯ ಬೆಲೆಯನ್ನು ನಿಯಂತ್ರಿಸಿದ ನಂತರ ಮೈಸೂರಿನಲ್ಲಿ ರಾಗಿಯೇ ಸಿಕ್ಕುತ್ತಿಲ್ಲವಂತೆ !

ಮೈಸೂರು ಸರ್ಕಾರದ ಸ್ತುತ್ಯ ಕಾರ್ಯ

ವಿಶೇಷ ಶಾಸನದ 13 ನೇ ವಿಧಿ ಉಪಯೋಗಿಸಿಕೊಂಡು, ಶ್ರೀಗಳಾದ ಎಲ್. ಎಸ್. ರಾಜು, ಪಿ. ಆರ್. ರಾಮಯ್ಯ, ಪಿ. ಬಿ. ಶ್ರೀನಿವಾಸ್ ರವರುಗಳನ್ನು ಪ್ರಭುತ್ವ ಖುಲಾಸೆ ಮಾಡಿದ್ದು ಸ್ತುತ್ಯಾರ್ಹ.

ಗೋಪಾಲರಾವ್ ಸಮಿತಿಗೆ 'ಕಂಟೆಸ್ಟ್' ಪರಿಶೀಲಿಸುವ ಅಧಿಕಾರ ಇಲ್ಲ. ವಿಚಾರಣಾ ವೇಳೆಯಲ್ಲಿ 'ಕಂಟಿಸ್ಟ್' ಕಂಡರೆ ಪರಿಶೀಲಿಸುವ ಅಧಿಕಾರ ಮಾತ್ರವಿದೆ. ವಿಚಾರಣಾ ಸಮಿತಿಯ ತೀರ್ಪು ಅನ್ಯಾಯ, ಅಕ್ರಮ. ಆದರೆ ರಾಜಶಾಸನ ರೀತ್ಯ ಶ್ರೇಷ್ಠ ನ್ಯಾಯಾಸ್ಥಾನಕ್ಕೆ ಅರ್ಜಿ ಪುನರ್ವಿಮರ್ಶನಾ ಹಕ್ಕಿಲ್ಲ. ಅಪರಾಧಿಗಳ ಬಗೆಗೆ ಪ್ರಭುತ್ವ ಸಹಾನುಭೂತಿ ತೋರಬೇಕು ಎಂಬ ಶ್ರೇಷ್ಠ ನ್ಯಾಯಾಸ್ಥಾನದ ತೀರ್ಪು ಘನತಾಪೂರ್ವಕವಾಗಿದೆ.

ಖುಲಾಸೆ ಮಾಡಲ್ಪಟ್ಟ ತ್ರಿಮೂರ್ತಿಗಳು ಪ್ರಜಾಭಿಪ್ರಾಯ ಪ್ರಕಾಶನ ಮಾಡಿ, ಸಾರ್ವಜನಿಕ ಅಭಿನಂದನಾರ್ಹರು.

'ಕಂಟೆಪ್ಟ್ ಆಫ್ ಕೋರ್ಟ್' ಪ್ರಸಂಗ ದೇಶವಿದೇಶಗಳಲ್ಲಿ ಕೌತುಕವನ್ನುಂಟು ಮಾಡಿತ್ತು. ಆದರೆ ಜಟಿಲ ಸಮಸ್ಯೆಗಳೆಲ್ಲವೂ ಮಂಜಿನಂತೆ ಕರಗಿ ಹೋದವು.

ಇಂಥಹ ಪ್ರಸಂಗ ಪುನಃ ಉಂಟಾಗದಿರಲಿ ಎಂಬುದೇ ನಮ್ಮ ಆಶಯ.

ಶ್ರೀ ಜಿನ್ನರ ಅಂತ್ಯಕ್ರಿಯೆ

ಮೊನ್ನೆ ರಾತ್ರಿ ಪಾಕಿಸ್ತಾನ ಗ|ಜ| ಜಿನ್ನ ನಿಧನರಾದ ಸುದ್ದಿ ದೇಶಾದ್ಯಂತ ನಿನ್ನೆ ಬೆಳಿಗ್ಗೆ ಹೊತ್ತಿಗೆ ಹಬ್ಬಿತು. ಸ್ಥಳೀಯ ಮಹಮದೀಯ ವ್ಯಾಪಾರಿಗಳ ನೇಕರು ತಮ್ಮ ಅಂಗಡಿಗಳನ್ನು ಬಂದು ಮಾಡಿದ್ದರು. ಮಹಮದೀಯರ ಜಟಕಗಳೆಲ್ಲ ಬಂದಾಗಿದ್ದವು. ವಿಶ್ವದಾದ್ಯಂತ ಸಂತಾಪ ಸೂಚನೆ ಪಾಕೀಸ್ತಾನಕ್ಕೆ ತಲಪುತ್ತಿವೆ. ಸಂಸ್ಥಾನದ ಸರ್ಕಾರಿ ಕಟ್ಟಡಗಳ ಮೆತ್ತು ಭಾರತ ಸರ್ಕಾರ ಭವನದ ಮೇಲಿನ ಧ್ವಜಗಳು ಅರ್ಧ ಮಟ್ಟದಲ್ಲಿ ಹಾರಾಡುತ್ತಿತ್ತು. ಕರಾಚಿಯಲ್ಲಿ ನೂತನವಾಗಿ ನಿರ್ಮಾಣವಾಗುತ್ತಿರುವ ಜುಮ್ಮಾ ಮಸೀದಿಯಲ್ಲಿ ಜಿನ್ನಾರವರ ಅಂತ್ಯಕ್ರಿಯೆ ಸಕಲ ಮರ್ಯಾದೆಯೊಡನೆ ನಡೆಯಿತು.

ಈ ವಾರದ ಭವಿಷ್ಯ

ಓಂ ಜ್ಯೋತಿಷ್ಕರಿಂದ

ಮೇಷ—ವ್ಯವಹಾರದಲ್ಲಿ ಶತ್ರು ಭಯ, ಮನೋವ್ಯಾಕುಲತೆ, ನಿಶ್ಚಿತರೇ ಶತ್ರುಗಳಾಗುವರು, ಆರ್ಥಿಕ ಮುಗ್ಗಟ್ಟು

ವೃಷಭ — ಆರೋಗ್ಯ ಧನಲಾಭ ವ್ಯವಹಾರದಲ್ಲಿ ಜಯ

ಮಿಥುನ — ಧನಾದಾಯವುಂಟು, ವ್ಯವಹಾರದಲ್ಲಿ ಸುಖವಿರುವುದಿಲ್ಲ.

ಕರ್ಕಾಟಕ—ಆರೋಗ್ಯವಿರುವುದಿಲ್ಲ ಮನಸ್ಸು ಹರ್ಷಯುತವಾಗಿರುವುದಿಲ್ಲ. ವ್ಯವಹಾರದಲ್ಲಿ ಭಯವಿರುತ್ತೆ

ಸಿಂಹ — ವ್ಯವಹಾರದಲ್ಲಿ ಮನ್ನಣೆಯುಂಟು, ಶತ್ರುಗಳಿಗೆ ಭಯವನ್ನುಂಟು ಮಾಡುವಿರಿ

ಕನ್ಯ— ಆರೋಗ್ಯ ಸಮರ್ಪಕವಾಗಿರುವುದಿಲ್ಲ. ಖರ್ಚು ಹೆಚ್ಚು.

ತುಲಾ— ಕಲಹದ ಭಯ, ಯೋಚನೆಗಳು ಹೆಚ್ಚುವು

ವೃಶ್ಚಿಕ — ಖರ್ಚು ಹೆಚ್ಚು, ನಿರುತ್ಸಾಹತೆ.

ಧನಸ್ಸು— ಆರೋಗ್ಯವೂ ಸ್ಥಿತಿಯೂ ಚೆನ್ನಾಗಿರುತ್ತದೆ

ಮಕರ—ಸರೋಪಕಾರದಲ್ಲಿ ಧನಲಾಭ. ವಿದ್ವಜ್ಜನರೊಂದಿಗೆ ಕೂಟ

ಕುಂಭ— ಕಷ್ಟಗಳು ಕಡಿಮೆಯಾಗಿ ಮನಸ್ಸು ಮೀನ

ಉಪನ್ಯಾಸ

ಮೈಸೂರು ಸೆ 10—ಮೈಸೂರು ಸಿಟಿ ಕೊಆಪರೇಟಿವ್ ಬ್ಯಾಂಕಿನ ಸಹಕಾರ ಶಿಕ್ಷಣ ಸಮಿತಿ ಆಶ್ರಯದಲ್ಲಿ ತಾ|| 13 ನೇ ಸೋಮವಾರ ಸಾಯಂಕಾಲ 6 ಗಂಟೆಗೆ ಬ್ಯಾಂಕು ಸಭಾಂಗಳದಲ್ಲಿ 'ಸಹಕಾರ ಕ್ಷೇತ್ರದಿಂದ ಸಣ್ಣ ಕೈ ಕಸಬುಗಳ ಬೆಳವಣಿಗೆ' ಎಂಬ ವಿಷಯದ ಮೇಲೆ ಅಸ್ಥಾನ ವಿದ್ವಾನ್ ಶ್ರೀ ಹೆಚ್. ಚನ್ನಕೇಶಯ್ಯಂಗಾರ್, ಎಂ ಒ ಎಲ್ ರವರು ಉಪನ್ಯಾಸ ಮಾಡುವರು.

At Opera
LODGER
14—9—48 ರಿಂದ
ಬೆಂಜಾಮಿನ್. ಶಾರದ, ಸಾದಿಕ್ ಅಲಿ
ಪಾತ್ರವಹಿಸಿರುವ
ಗರ್ ಗರ್
ಲ ಲ
(ಹಿಂದಿ)
ಪ್ರತಿ ದಿನ 3 ಆಟಗಳು

ವ

ಭಾರತ ಒಕ್ಕೂಟದ ನಾನಾ ತ್ಯ ಮತ್ತು ಸಂಸ್ಥಾನಗಳಿಗೆ ಕಂಚಿನ ಸಲುವಾಗಿ ಭಾರತ ಸರ್ಕಾರ ಅರಿವೆ ಅಧಿಕಾರಿ 40 ಸಹಸ್ರ ಬೇಲ್ ಅಹಮದಾಬಾದ್ ಒಟ್ಟೆ ಸರಬರಾಜು ಮಾಡಿರುವುದಾಗಿ ಗೊತ್ತಾಗಿದೆ

ಮೈಸೂರು, ಆ 13 — ನಾಳೆ ರಾತಿ 9 ಗಂಟೆಗೆ ಏಕಾದಶಿ ಪ್ರಯುಕ್ತ ಅಡ್ವೊಕೇಟ್ ಶ್ರೀ ಕೆ ವುಟ್ಟುರಾಯರ ಮನೆಯಲ್ಲಿ ಹರಿಕಥಾ ವಿದ್ವಾನ್ ಲಕ್ಷ್ಮಿಪತಿ ಸಹೋದರರಿಂದ 'ಭಕ್ತ ಮಯೂರಧ್ವಜ' ಎಂಬ ಹರಿಕಥೆಯು ನಡೆಯುತ್ತದೆ. ಸರ್ವರಿಗೂ ಆಹ್ವಾನವುಂಟು.

ಬೆಂಗಳೂರಿನಲ್ಲಿ ಸಮಾವೇಶಗೊಳ್ಳಲಿರುವ ನಗರ ಪೌರಸಭೆಯ ಅಧ್ಯಕ್ಷ, ಉಪಾಧ್ಯಕ್ಷ ಮತ್ತು ಸದಸ್ಯರುಗಳ ಸಮ್ಮೇಳನ ಬಗ್ಗೆ ಪರಿಶೀಲಿಸಲು ಮೈಸೂರು ಪೌರಸಭೆಯ ವಿಶೇಷಾಧಿವೇಶನ ನಾಳೆ ಸಂಜೆ 5 ಗಂಟೆಗೆ ಸಮಾವೇಶಗೊಳ್ಳುವುದು.

ಕಾತಿ ಜಿಲ್ಲೆಯ 800 ಗ್ರಾಮಗಳು ಗಂಗಾ ಪ್ರವಾಹದಿಂದ ಮುಳುಗಿವೆ.

ವ್ಯಾಸಪುರ ಶ್ರೀಮನ್ಮಹಾರಾಜರು ಮಂಡ್ಯ ಜಿಲ್ಲೆಯ ಪ್ರವಾಸ ಕಾರ್ಯಕ್ರಮವನ್ನು ರದ್ದುಗೊಳಿಸಿದ್ದಾರೆಂದು ಪ್ರಭುತ್ವ ಪ್ರಕಟಣಾಧಿಕಾರಿಗಳು 'ಸತ್ಯವಾದಿ' ಗೆ ತಿಳಿಸಿದ್ದಾರೆ.

ಸರ್ವ ಸಿದ್ಧತೆಗಳನ್ನು ಮಾಡಿಕೊಂಡಿರುವ ಭಾರತ ಸೇನೆ ಸಿಕಂದರಾಬಾದಿಗೆ ನುಗ್ಗಲು ಆಜ್ಞಾ ನಿರೀಕ್ಷಣೆಯಲ್ಲಿದೆ

ಹೈದರಾಬಾದಿನ ಮೇಲೆ ನಡೆಯುವ ಎಲ್ಲ ಧಾಳಿಗಳನ್ನು ಎದುರಿಸುವುದಾಗಿ ಪ್ರಮುಖಾಧಿಕಾರಿಗಳೊಬ್ಬರು ತಿಳಿಸಿದ್ದಾರೆ.

ಬೆಂಗಳೂರಿನಿಂದ ಶಿರಾಕ್ಕೆ ರೇಡಿಯೊ ಸೆಟ್ ತಂದಿದ್ದ ಇಬ್ಬರು ಮುಸ್ಲಿಂರಿಂದ ಅದನ್ನು ವಶಪಡಿಸಿಕೊಳ್ಳಲಾಯಿತು.

ತಿರುವದಿಲ್ಲ
ವುಡ್ ಲ್ಯಾಂಡ್ಸ್
ಅನೋಘ 2 ನೇ ವ
DO - DIL
ಸೂರಯ್ಯ, ಮೋತೀಲಾಲ್,
ಕರ್ಣದಿವಾಕ್ ಪಾತ್ರವಹಿಸಿರುವ
ದೋ - ದಿ ಲ್
ಕರ್ಣಾನಂದಕರ, ನೇತ್ರಾನಂದಕರ,
ಪ್ರೇಮಮಯ ಅಮೋಘ ಹಿಂದಿ ಚಿತ್ರ
— ಪ್ರತಿದಿನ 3 ಪ್ರದರ್ಶನಗಳು —

Save the Cow
ಗೋ ವಧೆ ನಿಲ್ಲಲಿ

Edited, Printed and Published by M S Krishna Rao at the Satyavadi Press, Chamaraj Agrahar-M

ಸಂಪುಟ ೭ : ಸಂಚಿಕೆ ೨] ॥ ಶ್ರೀ ॥ : ೨॥ 10-9-48

— ಪ್ರಬೋಧ —

ಶ್ರೀ ದ್ವಾರಕಾ ಜಗದ್ಗುರು ಸಂಸ್ಥಾನಾಧೀಶ್ವರರಾದ
ಶ್ರೀ ಶ್ರೀ ಅಭಿನವ ಸಚ್ಚಿದಾನಂದತೀರ್ಥ ಸ್ವಾಮಿಗಳವರ
ಉದಾರಾಶ್ರಯದಲ್ಲಿ ಪ್ರಕಟವಾಗುತ್ತಿರುವ
— ಬೋಧಪ್ರದ ಸಪ್ತಾಹಿಕ ಪ್ರಕಟನಮಾಲೆ —
ಸಂಪಾದಕ ; ಗುಂಡ್ಮಿ ಮಹಾಬಲಭಟ್ಟ, ವೇದಾಂತಶಿರೋಮಣಿ ವೇದಾಂತವಿಶಾರದ

ಶುದ್ಧಾಶುದ್ಧವಿವೇಕ

(ಮುಂದುವರಿದುದು)

ಇದೇ ರೀತಿ ಮನೋಮಯ ಕೋಷದಲ್ಲಿ ಯಾವದರಿಂದ ಚಾಂಚಲ್ಯವು ಹೆಚ್ಚುತ್ತದೋ, ಅಂತಹ ಹಾನಿಕಾರಕ ಶಬ್ದಗಳ ಹೆಸರು ವಿಕ್ಷೇಪವೆಂದು. ವಿಜ್ಞಾನಮಯ ಕೋಷದಲ್ಲಿ ಬುದ್ಧಿಯನ್ನು ಆವರಿಸುವ ಶಕ್ತಿಯನ್ನು ಆವರಣವೆನ್ನುತ್ತಾರೆ. ಯೋಗ್ಯ ಬುದ್ಧಿಯಿಂದ ತಿಳಿಯಲು ಯೋಗ್ಯವಾದ ಯಾವ ಆನಂದಮಯ ಕೋಷವಿದೆಯೋ, ಅದರಲ್ಲಿರುವ ಶಕ್ತಿಯನ್ನು ಆವರಣವೆನ್ನುತ್ತಾರೆ. ಭಾವನಾತ್ಮಕವಾದ ಅವಿದ್ಯೆಯೇ ಆನಂದಮಯ ಕೋಷದ ಆವರಣವು. ಈ ಆವರಣಗಳಿಂದ ಆಯಾ ಕೋಷಗಳ ಸ್ವರೂಪವು ಮುಚ್ಚಿಹೋಗಿರುತ್ತದೆ. ಈ ಆವರಣಗಳನ್ನು ಭೇದಿಸಿ ಆಯಾ ಕೋಷಗಳ ಸ್ವರೂಪವನ್ನು ತಿಳಿಯಲು ಶುದ್ಧಾಶುದ್ಧವಿವೇಕವು ಅವಶ್ಯಕವಾಗಿದೆ. ಈ ವಿವೇಕದ ದೊಡ್ಡ ವಿಷಯವು ಕಂಡುಬರುವದು ಆದರ ಉದ್ದೇಶವು ಮಾನವನಲ್ಲಿ ಮಲ, ವಿಕಾರ, ವಿಕ್ಷೇಪ ಆವರಣ ಹಾಗೂ ಅಸ್ಮಿತೆಯು ನೈದ್ಧಾಂತಿಕವಾದುದರಿಂದಲೇ ಅಗಿದೆ. ಎಷ್ಟೇ ಗಂಭೀರವಾದ ದಾರ್ಶನಿಕ ಭಿತ್ತಿಯ ನೆಲೆಯಲ್ಲಿ ಪ್ರಾಚೀನ ಆರ್ಯರು ಶುದ್ಧಾಶುದ್ಧ ವಿವೇಕವು ನೆಲೆಗೊಳಿಸಲ್ಪಟ್ಟಿದೆಯೆಂಬುದಾಗಿದೆ. ಈ ವಿವೇಚನೆಯಿಂದ ಮನದಟ್ಟಾಗಬಹುದಾಗಿದೆ. ಈ ಐದೂ ಪ್ರಕಾರದ ಕೆಟ್ಟ ಪ್ರಭಾವದ ಉದಾಹರಣೆಗಳು ಕೊಡಲಾಗುವುವು. ಅಪವಿತ್ರ ಪದಾರ್ಥಗಳ ಸಂಬಂಧದಿಂದ ಅನ್ನಮಯ ಕೋಷದ ಮಲವು ಬೆಳೆಯುವ ಉದಾಹರಣವು ಶಾಸ್ತ್ರಗಳಲ್ಲಿ ಕೊಡಲಾಗಿದೆ — ' ವಿಷ್ಠಾ ದಿಭಿಃ ಪೃಥನಃ ' (ಕರ್ಮ ಮೀಮಾಂಸಾ, ಕೃಯಾಪಾದ) ಶವದ ಸ್ಪರ್ಶವಾಗುವುದರಿಂದ ಪ್ರಾಣಮಯಕೋಷದ ಮೇಲೆ ಕೆಟ್ಟ ಪ್ರಭಾವವು ಬೀಳುತ್ತದೆ. ಶವದಿಂದ ಪ್ರಾಣಮಯ ತೆಗೆದು ಕೊಂಡು ಹೋಗಲು ಬಿಡುತ್ತದೆ ' ಶವಾದಿಭಿರ್ವಿತೀಯಃ '. ಸೂರ್ಯಚಂದ್ರ ಗ್ರಹಣದ ಸಮಯದಲ್ಲಿ ಯಾವ ಆಶೌಚವು ಆಚರಿಸಲ್ಪಡುವುದೋ, ಅದು ಪೃಥ್ವಿಯ ಸಂಬಂಧವು ಮನೋಮಯಕೋಷದೊಂದಿಗಿರುತ್ತದೆ. ಏಕೆಂದರೆ ಸೂರ್ಯಚಂದ್ರ ಗ್ರಹಗಳ ಆಕರ್ಷಣ ವಿಕರ್ಷಣ ಶಕ್ತಿಯಲ್ಲಿ ಗ್ರಹಣ ಕಾಲದಲ್ಲಿ ಬಾಧೆಯುಂಟಾಗುತ್ತದೆ. ಅದರ ದುಷ್ಪ್ರಭಾವವು ಮನೋಮಯಕೋಷದಿಂದ ಆರಂಭವಾಗುತ್ತದೆ— ' ಆಶೌಚಾದಿಭಿಸ್ತೃತೀಯಃ ' ಕುಸಂಸ್ಕಾರದಿಂದ ವಿಜ್ಞಾನಮಯ ಕೋಷದಲ್ಲಿ ಮಾಲಿನ್ಯವುಂಟಾಗುತ್ತದೆ ಹಾಗೂ ಕುಪ್ರಭಾವವು ವಿಜ್ಞಾನಮಯ ಕೋಷದಿಂದ ಆನಂದಮಯ ಕೋಷವು ಮಲಿನವಾಗಿ ಅದು ಪ್ರಭಾವವು ಇತರ ಕೋಷಗಳವರೆಗೆ ತಲಪುವುದು — ' ಸದಸದ್ಭಿಃ ಪಶ್ಚಿಮಃ ' ಈಯೆಲ್ಲ ವಿಷಯವೂ ವೇದದ ಕರ್ಮಮೀಮಾಂಸಾ ಶಾಸ್ತ್ರದಲ್ಲಿ ಚೆನ್ನಾಗಿ ಸಿದ್ಧಪಡಿಸಿ ತೋರಿಸಲ್ಪಟ್ಟಿದೆ. ಮತ್ತು ಈ ಐದು ಸ್ವಭಾವಗಳೂ ಒಂದು ಇನ್ನೊಂದರೊಂದಿಗೆ ಸೇರಿಕೊಂಡೂ ಇರುತ್ತವೆಂದು ಸಹ ಸಿದ್ಧಗೊಳಿಸಿ ತೋರಿಸಲಾಗಿದೆ — ' ಅನ್ಯೋನ್ಯ ಸಮ್ಬನ್ಧಾಚ್ಚ ' ಇದೇ ಕಾರಣದಿಂದ ಸುಸಂಸ್ಕೃತವಾದ ಆರ್ಯಪಿಂಡವನ್ನು ಈ ಐದೂ ಕುಪ್ರಭಾವಗಳಿಂದ ನಿರಂತರವಾಗಿ ರಕ್ಷಿಸಿಟ್ಟುಕೊಳ್ಳುವ ಸಲುವಾಗಿ ವೇದದಲ್ಲಿಯೂ ಸ್ಮೃತಿ ಶಾಸ್ತ್ರದಲ್ಲಿಯೂ ಶುದ್ಧಾಶುದ್ಧ ವಿವೇಕವನ್ನು ಇಷ್ಟು ವಿಸ್ತೃತವಾಗಿ ವಿಚಾರ ಮಾಡಲಾಗಿದೆ. ಈ ದುರ್ಗವು ಸ್ಥೂಲ ರಾಜ್ಯದಿಂದ ಸೂಕ್ಷ್ಮ ರಾಜ್ಯದವರೆಗೆ ವಿಸ್ತೃತವಾಗಿರುವ ಕಾರಣ ಇದರ ಪಾಲನೆಯ ನಡತೆಯು ವರ್ಣಾಶ್ರಮಿಯಾದ ಆರ್ಯ ಜಾತಿಯಲ್ಲಿ ಸರ್ವತ್ರ ಕಂಡುಬರುತ್ತದೆ.

" ಹಿಂದೂ ಕೋಡು "

ಶ್ರೀ ರಾಜೇಂದ್ರ ಪ್ರಸಾದರು ಭಾರತ ವಿಧಾನ ಸಮ್ಮೇಲನ ಮತ್ತು ಕಾಂಗ್ರೆಸ್ಸಿನ ಅಧ್ಯಕ್ಷರು. ' ಹಿಂದೂ ಕೋಡ್ ಬಿಲ್ಲಿ ' ನ ವಿಷಯದಲ್ಲಿ ಒಂದು ಕಾಗದವನ್ನು ಪ್ರಧಾನಮಂತ್ರಿ ಪಂ॥ ನೆಹರೂರವರಿಗೆ ಬರೆದಿದ್ದರು. ಇದು ತಾ॥ ೩೧ ಜುಲೈದು. ಅಸೆಂಬ್ಲಿಯ ಕಾಂಗ್ರೆಸ್ ಪಾರ್ಟಿಯ ಕಾರ್ಯದರ್ಶಿ ಶ್ರೀ ಅನಂತಶಯನಂ ಐಯ್ಯಂಗಾರ್ಯರು ಇದರ ನಕಲನ್ನು ಎಲ್ಲಾ ಸದಸ್ಯರಿಗೆ ಕಳಿಸಿದರು.

' ಕಾಗದದ ಪರಿಣಾಮವಾಗಿಯೂ, ಸನಾತನಿಗಳ ತೀವ್ರ ವಿರೋಧ ಪರಿಣಾಮವಾಗಿಯೂ ಸಧ್ಯಕ್ಕೆ ' ಹಿಂದೂ ಕೋಡು ಬಿಲ್ಲು ' ಮುಂದೆ ಹೋಯಿತು.

ಮೇಲ್ಕಂಡ ಕಾಗದದಲ್ಲಿ ಶ್ರೀ ರಾಜೇಂದ್ರ ಪ್ರಸಾದರು ಪ್ರಕೃತ ವಿಷಯವನ್ನು ಬಹಳ ಗಾಂಭೀರ್ಯ, ಯೋಗ್ಯತೆ, ನಿಷ್ಪಕ್ಷಪಾತದಿಂದ ವಿಮರ್ಶಿಸಿದ್ದಾರೆ. ಮುಂಚೆ ವೈಧಾನಿಕ ಪ್ರಶ್ನೆಯನ್ನೆತ್ತಿದ್ದಾರೆ— ' ಈಗಿರುವ ವಿಧಾನ ಸಮ್ಮೇಳನವು ಅಧಿಕಾಂಶ ಜನಸಂಖ್ಯೆಗೆ ಸಂಬಂಧಿಸಿರುವ ಇಂತಹ ಮಹತ್ವಪೂರ್ಣ ವಿಷಯವನ್ನು ವಿಮರ್ಶಿಸಲು ಅಧಿಕಾರಿಯೆಂಬುದರ ಬಗ್ಗೆ ಸಂಶಯವಿದೆ. ಭಾರತ ಖಂಡದ ಗಣರಾಜ್ಯ ಸಂವಿಧಾನವನ್ನು ತಯಾರಿಸಲು ಈ ವಿಧಾನ ಸಮ್ಮೇಳನವು ರಚಿತವಾಗಿ, ಅದನ್ನೇ ಧ್ಯಾನದಲ್ಲಿಟ್ಟುಕೊಂಡು ಅದಕ್ಕಾಗಿ ಪ್ರತಿನಿಧಿಗಳನ್ನು ಚುನಾಯಿಸಲಾಯಿತು ಈ ರೀತಿಯಾಗಿ ಸಂಘಟಿತವಾದ ವಿಧಾನ ಸಮ್ಮೇಳನವು ಅಸೆಂಬ್ಲಿ ರೂಪದಲ್ಲಿ ಪರಿಣಿತವಾಯಿತು. ಅದೇ ಈಗ ಪ್ರಾಚೀನ ಕೇಂದ್ರ ಅಸೆಂಬ್ಲಿ ಮತ್ತು ಕೌನ್ಸಿಲ್ಲಿನ ಸಂಯುಕ್ತ ರೂಪದಿಂದ ಕೆಲಸಮಾಡುತ್ತಿದೆ. ಈ ರೀತಿಯು ಶೀಘ್ರತೆಯಲ್ಲಿ ಕಾನೂನು ರಚಿಸುವಾಗ, ಇನ್ನೊಂದು ಸಭೆಯು ತಡೆಯು ಇಲ್ಲದಾಯಿತು. '

ಹಿಂದೂ ಕಾನೂನಿಗೆ ಯಾವ ಸಿದ್ಧಾಂತಗಳು ಆಧಾರವಾಗಿವೆಯೋ ಅವುಗಳ ಸ್ಥಾನದಲ್ಲಿ ವಿದೇಶೀ ಸಿದ್ಧಾಂತಗಳನ್ನೂ ಮತ್ತು ಪ್ರತಿಯೊಂದು ಹಿಂದೂ ಕುಟುಂಬವು ಛಿನ್ನಭಿನ್ನವಾಗುವ ಸಂಭವನವಿರುವ ಸಿದ್ಧಾಂತವನ್ನೂ ಈ ಬಿಲ್ಲು ತರುತ್ತಿದೆ. '

' ಈ ಬಿಲ್ಲನ್ನು ಪಾಸುಮಾಡುವುದೆಂದರೆ— ಹಿಂದೂಗಳ ಸಾಮಾಜಿಕ ಕಾನೂನಿನ ಮೂಲಭೂತವಾದ ಸಿದ್ಧಾಂತಗಳಲ್ಲಿ ಪರಿವರ್ತನೆಗೊಳಿಸುವಂತಹ ಶಾಸನವನ್ನು ಬಲಾತ್ಕಾರವಾಗಿ ತರುವುದಾಗಿದೆ ಲೆಖ್ಖಕ್ಕೆ ಸಿಗದ ಅಥವಾ ಬಹಳ ಕಮ್ಮಿ ಪ್ರಗತಿಶೀಲರೆನಿಸಿವವರನ್ನು ಸಂತುಷ್ಟಗೊಳಿಸಲು ಇದನ್ನು ತರುವುದಾಗಿದೆ '

' ಇದೆಲ್ಲವೂ ಒಟ್ಟುದಾರರೆಲ್ಲರ ಅಭಿಪ್ರಾಯ ತಿಳಿಯದೆಯೇ ಮಾಡಲ್ಪಡುತ್ತಿದೆ. ಅದೂ ಕೂಡ ರಾಜ್ಯಾಂಗ ತಯಾರಿಸುವ ಒಂದು ಸಮ್ಮೇಲನ ಮೂಲಕ. ಈ ವಿಧಾನ ಸಮಿತಿಯನ್ನು ದೇಶದ ಎಲ್ಲಕ್ಕಿಂತ ದೊಡ್ಡದಾದ ಜಾತಿಯ ವ್ಯಕ್ತಗತ ಕಾನೂನುಗಳಲ್ಲಿ ಬದಲಾವಣೆ ಮಾಡುವುದಕ್ಕಾಗಿ ಚುನಾಯಿಸಿರಲಿಲ್ಲ '

ಈ ಹಿಂದೂ ಕೋಡು ಬಿಲ್ಲನ್ನು ಮೊದಲನೇ ಸಾರಿ ಕೇಂದ್ರೀಯ ಅಸೆಂಬ್ಲಿಯಲ್ಲಿ ತಂದಾಗ ಡಾಕ್ಟರ್ ಕೈಲಾಸನಾಥ ಕಟಜೂರವರು ಹೀಗೆ ವಿರೋಧಿಸಿದ್ದರು—' ಚುನಾವಣೆಯು ಘೋಷಣೆಗಳಲ್ಲಿ ಸ್ಪಷ್ಟವಾದ ಶಬ್ದದಿಂದ ಈ ರೀತಿಯ ಪರಿವರ್ತನ ಮಾಡುವ ಅಧಿಕಾರವನ್ನು ಜನತೆಯಿಂದ ಪಡೆಯುವವರೆಗೆ ಇಂತಹ ಶಾಸನ ಸಭೆಗಳು ಈ ರೀತಿಯ ಕಾನೂನುಗಳನ್ನು ಮಾಡಲಾರವು. ಕೈಲಾಸನಾಥ ಕಾಟ್ಜೂರವರು ಸಂಯುಕ್ತ ಪ್ರಾಂತ್ಯದ ಎಂಡೂ ಕಾಂಗ್ರೆಸ್ ಮಂತ್ರಿಮಂಡಲಗಳಲ್ಲಿ ನ್ಯಾಯ ಮಂತ್ರಿಯಾಗಿದ್ದರು; ಅಮೇಲೆ ಒರಿಸ್ಸಾ ಪ್ರಾಂತ್ಯದ ಗವರ್ನರಾಗಿದ್ದು ಈಗ ಕಲ್ಕತ್ತಾ ಗವರ್ನರಾಗಿದ್ದಾರೆ. ಇದು ಅಂತಹ ಮಾನ್ಯ ಮುಖಂಡರ ಅಭಿಪ್ರಾಯ.

ಕೊನೆಗೆ ಡಾ॥ ರಾಜೇಂದ್ರ ಪ್ರಸಾದರು ಹೀಗೆ ಬರೆದಿದ್ದರು— ' ಹಿಂದೂ ಕಾನೂನು ಸಮಿತಿಯು ಪಡೆದ ಸಾಕ್ಷ್ಯಗಳಲ್ಲಿ ಹೆಚ್ಚಿನಂಶವು ಅದರ ಮುಖ್ಯ ಶಿಫಾರಸ್ಸುಗಳಿಗೆ ವಿರುದ್ಧವಾಗಿದೆ. ಇದಲ್ಲದೆ ಈ ಕಾಲದಲ್ಲಿ ಈ ಬಿಲ್ಲು ಅಗತ್ಯವಾಗಿಯೂ ಕಾಣುವುದಿಲ್ಲ '.

ಶ್ರೀ ರಾಜೇಂದ್ರ ಪ್ರಸಾದರ ನಿಷ್ಪಕ್ಷವಾದ ಈ ಅಭಿಪ್ರಾಯಗಳಿಗಾಗಿ ಧನ್ಯವಾದಗಳು.

ಕಾಂಗ್ರೆಸ್ ಅಧ್ಯಕ್ಷರ ಈ ಪಕ್ಷ ಸರಣಿಗಾದರೂ ಕಾಂಗ್ರೆಸ್ ಮಂಡಲವು ಮನ್ನಣೆಕೊಡಬೇಡವೇ